**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯಾಲಯ**

**ಅಫಜಲಪೂರ**

**ಸಿ.ಸಿ. ನಂ.430/2018**

**ದೇವಲಗಾಣಗಾಪೂರ ಪೋಲಿಸ ಠಾಣೆ**

॥ ವಿರುದ್ಧ ॥

**ರಾಮಜಿ ನವಲೆ**

**ಃಆರೋಪಣೆಃ**

ರಾಮಜಿ ತಂದೆ ವಿಠಲ ನವಲೆ
ವಯಸ್ಸುಃ 33-ವರ್ಷ, ಉದ್ಯೋಗಃ ಚಾಲಕ
ಸಾ|| ಮುನ್ನಹಳ್ಳಿ ತಾ. ಆಳಂದ, ಜಿ. ಕಲಬುರಗಿ

ಶ್ರೀ **ಪ್ರಶಾಂತ ಬಾದವಾಡಗಿ,** ಬಿ.ಎ., ಎಲ್.ಎಲ್.ಬಿ., (ಸ್ಪೇಷಲ್) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

ದಿನಾಂಕ 24.02.2018 ರಂದು ಸಾಯಂಕಾಲ 6.00 ಗಂಟೆಗೆ ಚೌಡಾಪೂರ-ಅಫಜಲಪೂರ ರಸ್ತೆಯ ಮೇಲೆ ಶ್ರಿ ದತ್ತ ದಾಬಾ ಹತ್ತಿರ ಆರೋಪಿಯಾದ ನೀನು ಬಸ್ ನಂ.ಕೆಎ-32/ಎಫ್-1860 ನ್ನು ಅತಿ ವೇಗ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು, ಚಾಸಾ-12 ರವರ ಮಗನಾದ ಮೃತ ಸಂಜೀವಕುಮಾರ ತಂದೆ ಪರಮೇಶ್ವರ ಸುಂಟನೂರ ಈತನ ಮೋಟರ ಸೈಕಲ ನಂ.ಕೆಎ-27/ಆರ್-4978 ಕ್ಕೆ ಅಪಘಾತಪಡಿಸಿ ಭಾರತ ದಂಡ ಸಂಹಿತೆ ಕಲಂಃ279 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀ.

ಮೇಲೆ ವಿವರಿಸಿದ ದಿನಾಂಕ, ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಯಾದ ನೀನು ಬಸ್ ನಂ.ಕೆಎ-32/ಎಫ್-1860 ಅತಿ ವೇಗ ಹಾಗೂ ನಿರ್ಲಕ್ಷತನದಿಂದ ಚಾಸಾ-1 ರವರ ಮಗನಾದ ಸಂಜೀವಕುಮಾರ ಸುಂಟನೂರನ ಮೋಟರ ಸೈಕಲಗೆ ಡಿಕ್ಕಿಪಡಿಸಿ ಭಾರಿ ಒಳಪೆಟ್ಟು ಹಾಗೂ ಭಾರಿ ರಕ್ತಗಾಯಗಳಾಗಿ ಮೃತಪಡುವಂತೆ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ304(ಎ) ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀ.

ಜೆ.ಎಮ್.ಎಫ್.ಸಿ, ಅಫಜಲಪೂರ

ದಿನಾಂಕಃ 28.03.2019

## <u>ಆರೋಪಿಯ ಹೇಳಿಕೆ</u>

ಪ್ರ-1 ಮೇಲೆ ಓದಿ ಹೇಳಲಾದ ಅರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೀಯಾ ಅಥವಾ ವಿಚಾರಣೆ ಬಯಸುತ್ತೀಯಾ?
ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಅರೋಪಣೆಗಳನ್ನು ಅರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅತನು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ

ದಿನಾಂಕಃ 28.03.2019 ಜೆ.ಎಮ್.ಎಫ್.ಸಿ, ಅಫಜಲಪೂರ